**ಸಾರಿಸ್ಕದಲ್ಲಿ ಹುಲಿ ಸಂತತಿ ಹೆಚ್ಚಳಕ್ಕೆ ಸರ್ಕಾರ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಆದರೆ, ಹೆಣ್ಣುಹುಲಿಗಳಿಗೆ ಗಂಡನ್ನು ದೊರಕಿಸಿಕೊಡುವುದೇ ದೊಡ್ಡ ಸಮಸ್ಯೆಯಾಗಿದೆ.**



# ಸಾರಿಸ್ಕದ ಹೆಣ್ಣು ಹುಲಿಗೆ ಗಂಡು ದಿಕ್ಕಿಲ್ಲ

■ ಗುರುರಾಜ್ ಎಸ್. ದಾವಣಗೆರೆ

ರಾಜಸ್ಥಾನದ ಅಳ್ವಾರ್ ಜಿಲ್ಲೆಯ ಸಾರಿಸ್ಕ ರಾಷ್ಟ್ರೀಯ ಉದ್ಯಾನವನ ಮತ್ತೆ ಸುದ್ದಿಯಲ್ಲಿದೆ. ಅರಣ್ಯ ಪಾಲಕರ ತೀವ್ರ ನಿಗಾದಲ್ಲಿರುವ ಪ್ರಾಯದ ಐದು ಹೆಣ್ಣು ಹುಲಿಗಳಿಗೆ ಗಂಡು ಸಂಗಾತಿಗಳಿಲ್ಲ. ಇರುವ ಗಂಡು ಹುಲಿಗಳು ಮೂರು. ಅವುಗಳಲ್ಲಿ ಒಂದು ಮುದಿಯಾಗಿದ್ದು ಉಳಿದೆರಡರಲ್ಲಿ ಒಂದು ಪ್ರಾಯಕ್ಕೆ ಬಂದಿದೆ. 2008ರಲ್ಲಿ ರಣಥಂಬೋರ್ ಅರಣ್ಯದಿಂದ ತರಲಾಗಿದ್ದ ಗಂಡು ಹುಲಿ 'ದಾರಾ'ನನ್ನು ಗ್ರಾಮಸ್ಥರೇ ವಿಷವುಣಿಸಿ ಸಾಯಿಸಿದ ನಂತರ ಈ ಸಮಸ್ಯೆ ಉಲ್ಬಣಗೊಂಡಿದೆ. ಗಂಡು ಹುಲಿಯ ಸಂಗ ಬಯಸಿ ದಿನವೊಂದಕ್ಕೆ 25 ಕಿ.ಮೀ. ಕ್ರಮಿಸಿದರೂ ಮಿಲನಕ್ಕೆ ಗಂಡು ಸಿಗುವುದು ಕಷ್ಟವಾಗಿದೆ. ಇದು ಹೀಗೆಯೇ ಮುಂದುವರೆದರೆ ಹುಲಿಗಳ ಸಂತತಿಯ ವೃದ್ಧಿಗೆ ಅಡಚಣೆಯಾಗುವುದಲ್ಲದೆ, ದೊಡ್ಡ ಪ್ರಾಕೃತಿಕ ಅಸಮತೋಲನಕ್ಕೂ ಕಾರಣವಾಗಬಹುದು ಎಂದು ಹುಲಿ ತಜ್ಞರು ಆತಂಕಗೊಂಡಿದ್ದಾರೆ.

## ಇದ್ದ ಹುಲಿಗಳೆಲ್ಲಾ ಮಾಯ!

1975ರಿಂದ 2000 ಇಸವಿವರೆಗೆ ಸಾರಿಸ್ಕ 'ಹುಲಿಗಳ ಬೀಡು' ಎಂದೇ ಖ್ಯಾತವಾಗಿತ್ತು. ಆಗ 1,200 ಚ.ಕಿ.ಮೀ. ವ್ಯಾಪ್ತಿಯ ಕಾಡಿನಲ್ಲಿ 25 ಹುಲಿಗಳು ಇದ್ದವು. 2002ನೇ ಇಸವಿ ವೇಳೆಗೆ ಕಳ್ಳಬೇಟೆಗೆ ಬಲಿಯಾಗಿ ಇದ್ದ ಎಲ್ಲ ಹುಲಿಗಳನ್ನು ಕಳೆದುಕೊಂಡು ಸಾರಿಸ್ಕ ಬರಡಾಗಿ ಹೋಯಿತು. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ವರದಿಗಾರ ಜೇ ಮಜುಮ್‌ದಾರ್ ಹುಲಿಗಳ ಮಾರಣಹೋಮದ ಕುರಿತು ಲೇಖನ ಬರೆದು ಕೇಂದ್ರ ಸರ್ಕಾರದ ಗಮನ ಸೆಳೆದರು. ಅಂದು ಪ್ರಧಾನಿಯಾಗಿದ್ದ ಮನಮೋಹನ್ ಸಿಂಗ್ ವಿಷಯದ ಗಾಂಭೀರ್ಯ ಅರಿತು ಬೇಟೆ ನಿಯಂತ್ರಿಸಲು 'ಟೈಗರ್ ಟಾಸ್ಕ್‌ಫೋರ್ಸ್' ರಚಿಸಿ, ಅಪಾರ ಧನಸಹಾಯವನ್ನೂ ಮುಡಿಪಾಗಿಟ್ಟರು. ಅಷ್ಟರಲ್ಲಿ ಹುಲಿಗಳು ತೆರವು ಮಾಡಿದ್ದ ಜಾಗದಲ್ಲಿ ಚಿರತೆಗಳು ಬಂದು ಕುಳಿತು ಹಾವಳಿ ಮಾಡತೊಡಗಿದ್ದವು. ಇದು ಹುಲಿಯ ಆವಾಸದಲ್ಲಿ ಏರುಪೇರುಂಟು ಮಾಡುವ ಸಂಕೇತ ರವಾನಿಸಿತ್ತು. ಟೈಗರ್ ಟಾಸ್ಕ್‌ಫೋರ್ಸ್‌ನವರು 'ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ' (**NTCA National Tiger Conservation Authority**) ಸ್ಥಾಪಿಸಿ, ಸಲಹೆ ಕೇಳಿತು. ಹುಲಿಗಳಿಲ್ಲದ ಅತೀ ದೊಡ್ಡ ಕಾಡು ಬೇರೊಂದು ಅಸಮತೋಲನ ಹುಟ್ಟುಹಾಕುವ ಮೊದಲು ಪಕ್ಕದ ರಣಥಂಬೋರ್‌ನಿಂದ ಹುಲಿಗಳನ್ನು ಸ್ಥಳಾಂತರಿಸಿ ಅವುಗಳನ್ನು ಸಂರಕ್ಷಿಸಿ ಸಂತತಿ ಮುಂದುವರಿಸಲು ಕ್ರಮತೆಗೆದುಕೊಳ್ಳಬೇಕೆಂದು ಸಲಹೆ ನೀಡಿತು. ಆಗ ನಡೆದದ್ದೇ ಭಾರತದ ವನ್ಯ ಇತಿಹಾಸದ ಮೊದಲ ಹುಲಿ ಸ್ಥಳಾಂತರ.

## ಹುಲಿಗಳ ಏರ್ ಲಿಫ್ಟ್

ರಣಥಂಬೋರ್ ಮತ್ತು ಸಾರಿಸ್ಕಗಳ ಕಾಡಿನ ಸಂರಚನೆ ಒಂದೇ ಬಗೆಯದು. ಎರಡೂ ಎಲೆ ಉದುರಿಸುವ ಕಾಡುಗಳೇ. ಅಲ್ಲದೆ ಬಲಿ ಪ್ರಾಣಿಗಳ ಸಾಂದ್ರತೆಯೂ ಎರಡೂ ಕಾಡುಗಳಲ್ಲಿ ಒಂದೇ ರೀತಿಯಲ್ಲಿತ್ತು. ಆದ್ದರಿಂದ ರಣಥಂಬೋರ್‌ನಿಂದಲೇ ಹುಲಿಗಳನ್ನು ಸ್ಥಳಾಂತರಿಸುವುದೆಂದು ನಿರ್ಧರಿಸಿ ಐದು ಹುಲಿಮರಿಗಳನ್ನು ಶಾರ್ಟ್‌ಲಿಸ್ಟ್ ಮಾಡಲಾಯಿತು. ಇವುಗಳ ವಯಸ್ಸು ಒಂದು ವರ್ಷವಾಗಿದ್ದಾಗ ಅವುಗಳನ್ನು ತಾಯಿಯಿಂದ ಬೇರ್ಪಡಿಸಲಾಗಿತ್ತು. ವಯಸ್ಸಾದ ಹುಲಿಗಳು ತಾವಿರುವ ಆವಾಸದಲ್ಲಿ ತಮ್ಮ ಭದ್ರನೆಲೆ ಸ್ಥಾಪಿಸಿಕೊಳ್ಳುವುದರಿಂದ ಅವುಗಳನ್ನು ಬೇರೊಂದು ಕಾಡಿಗೆ ಸ್ಥಳಾಂತರಿಸಿದರೆ ಹೊಸ ಪ್ರದೇಶಕ್ಕೆ ಹೊಂದಿಕೊಳ್ಳಲು ತೊಂದರೆಯಾಗುತ್ತದೆ ಎಂದು ಗೊತ್ತಿದ್ದುದರಿಂದ ಮರಿ ಹುಲಿಗಳನ್ನು ಆಯ್ಕೆಮಾಡಲಾಯಿತು. ಇದು ನಡೆದದ್ದು 2005ರ ಅಂತ್ಯದಲ್ಲಿ. 2007ರ ವೇಳೆಗೆ ಈ ಹುಲಿಗಳಿಗೆ ರೇಡಿಯೊ ಕಾಲರ್ ತೊಡಿಸಿ